ದಿನಾಂಕ 03-09-2015 ರಂದು ನಡೆದ ಕರ್ನಾಟಕ ಮಾಹಿತಿ ಆಯೋಗದ ರಾಜ್ಯ ಮುಖ್ಯ ಮಾಹಿತಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು

**ಸಭೆಯಲ್ಲಿ ಹಾಜರಿದ್ದವರು:-**

1) ಶ್ರೀ ಟಿ. ರಾಮನಾಯಕ್, ರಾಜ್ಯ ಮುಖ್ಯ ಮಾಹಿತಿ ಆಯುಕ್ತರು (ಪ್ರ).
2) ಶ್ರೀ ಎಸ್.ಡಿ. ಸಜ್ಜನರ್, ರಾಜ್ಯ ಮಾಹಿತಿ ಆಯುಕ್ತರು.
3) ಶ್ರೀ ಎಲ್. ಕೃಷ್ಣಮೂರ್ತಿ, ರಾಜ್ಯ ಮಾಹಿತಿ ಆಯುಕ್ತರು.
4) ಶ್ರೀ ಶಂಕರ್ ಆರ್. ಪಾಟೀಲ್, ರಾಜ್ಯ ಮಾಹಿತಿ ಆಯುಕ್ತರು.
5) ಶ್ರೀ ವೃಷಭೇಂದ್ರ ಮೂರ್ತಿ, ಕಾರ್ಯದರ್ಶಿ.
6) ಶ್ರೀಮತಿ ಶ್ರೀಲತ ಕೋಟೆಮಠ್, ಅಧೀನ ಕಾರ್ಯದರ್ಶಿ.

ಸಭೆಯಲ್ಲಿ ಈ ಕೆಳಕಂಡ ವಿಷಯಗಳನ್ನು ಚರ್ಚಿಸಲಾಯಿತು.

ದಿನಾಂಕ:07-08-2015ರಂದು ನಡೆದ ಸಭೆಯ ಅನುಪಾಲನಾ ವರದಿಯನ್ನು ಮಾನ್ಯ ಕಾರ್ಯದರ್ಶಿಗಳು ಸಭೆಗೆ ತಿಳಿಸಿದರು.

1) ಈ ದಿನದ ಅಜೆಂಡಾದಂತೆ ಕರ್ನಾಟಕ ಮಾಹಿತಿ ಆಯೋಗದ ಕಟ್ಟಡದ ನಿರ್ಮಾಣದ ಕುರಿತು ಕರ್ನಾಟಕ ಮಾಹಿತಿ ಆಯೋಗದ ಹೊಸ ಕಟ್ಟಡದ ನಿರ್ಮಾಣದ ಒಳಾಂಗಣ ವಿನ್ಯಾಸದ ಬಗ್ಗೆ ಕಾರ್ಯದರ್ಶಿಗಳು ಪ್ರಸ್ತಾಪಿಸುತ್ತಾ, ಈ ಹಿಂದೆ ಈ ಸಂಬಂಧ ಬರೆದಿರುವ ಪತ್ರದಂತೆ ಕಾರ್ಯವನ್ನು ತ್ವರಿತಗತಿಯಲ್ಲಿ ನಡೆಸಲು ಅನುಕೂಲವಾಗುವ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುವುದಾಗಿ ಸೂಚಿಸುವಂತೆ ಕಾರ್ಯಪಾಲಕ ಅಭಿಯಂತರರನ್ನು ಒಳಗೊಂಡಂತೆ ಸಭೆಯನ್ನು ಕರೆಯಲು ಸೂಚಿಸಿದರು. ಈ ಸಂಬಂಧ ಸಭೆ ದಿನಾಂಕ:04-09-2015 ರಂದು ಕಾರ್ಯಪಾಲಕ ಅಭಿಯಂತರರು, ಮುಖ್ಯ ವಾಸ್ತುಶಿಲ್ಪಕಾರರು ಹಾಗೂ ಲೋಕೋಪಯೋಗಿ ಇಲಾಖೆಯ ಮುಖ್ಯಸ್ಥರೊಂದಿಗೆ ಸಂಜೆ 4.00 ಗಂಟೆಗೆ ಸಭೆಯನ್ನು ಕರೆಯಲು ಸಭೆ ಸಮ್ಮತಿ ಸೂಚಿಸಿತು.

ಕ್ರಮ: ಕಾರ್ಯದರ್ಶಿ

2) ಕರ್ನಾಟಕ ಮಾಹಿತಿ ಆಯೋಗದ ಆದೇಶ ಸಂಖ್ಯೆ: ಕೆಐಸಿ/9756/ಎಪಿಎಲ್/2014ರ ಬಗ್ಗೆ ಸಭೆ ಕೂಲಂಕುಷವಾಗಿ ಚರ್ಚಿಸಿ ದಿನಾಂಕ:18-08-2014ರಂದು ಕೋರ್ಟ್‌ಹಾಲ್-4 ರಲ್ಲಿ ನಡೆದಂತಹ ಪ್ರಸಂಗ ಕುರಿತು ಪೊಲೀಸ್ ಮತ್ತು ಗೃಹ ಇಲಾಖೆಗೆ ಪತ್ರಿಸಬೇಕಾಗಿ ಸಭೆ ಸೂಚಿಸಿತು.

ಕ್ರಮ: ಕಾರ್ಯದರ್ಶಿ

3) ಕಾನೂನು ಅಧಿಕಾರಿಗಳ ನೇಮಕಾತಿ ಕುರಿತು ಕಾರ್ಯದರ್ಶಿಗಳು ಪ್ರಸ್ತಾಪಿಸುತ್ತಾ, ಈ ಹಿಂದಿನಂತೆ ರಾಜ್ಯ ಉಚ್ಚ ನ್ಯಾಯಾಲಯಕ್ಕೆ ಕಳೆದ ಒಂದು ವರ್ಷದ ಹಿಂದೆ ನಿವೃತ್ತಗೊಂಡ ಜಿಲ್ಲಾ ಸೆಷನ್ಸ್ ನ್ಯಾಯಾಧೀಶರ ಮಾಹಿತಿಯನ್ನು ಈಗಾಗಲೇ ತರಿಸಿದ್ದು, ಮುಂದಿನ ಕಾರ್ಯದ ಬಗ್ಗೆ ನಿರ್ದೇಶನ ಕೋರಲಾಗಿ ಸಭೆ ಮತ್ತೊಮ್ಮೆ ರಾಜ್ಯ ಉಚ್ಚ ನ್ಯಾಯಾಲಯದ ರಿಜಿಸ್ಟ್ರಾರ್‌ರವರಿಗೆ ನಿವೃತ್ತಗೊಂಡ ಜಿಲ್ಲಾ ಸೆಷನ್ಸ್ ನ್ಯಾಯಾಧೀಶರು ಸರ್ಕಾರದ ನ್ಯಾಯಾಂಗ ಇಲಾಖೆಯಲ್ಲಿ ಕಳೆದ ಎರಡು ವರ್ಷಗಳಲ್ಲಿ ಸೇವೆಸಲ್ಲಿಸಿದವರ ಮಾಹಿತಿಯನ್ನು ಪಡೆಯಲು ಸೂಚಿಸಿತು.

ಕ್ರಮ: ಕಾರ್ಯದರ್ಶಿ

4) ಅಧ್ಯಕ್ಷರ ಅನುಮತಿ ಮೇರೆಗೆ ಇತರೇ ವಿಷಯಗಳು.

1) ಕರ್ನಾಟಕ ಮಾಹಿತಿ ಆಯೋಗದ ಆಯುಕ್ತರ ವಾಹನಗಳಿಗೆ ಅಂಬರ್ ಲೈಟ್ ಅಳವಡಿಸುವ ಬಗ್ಗೆ ಸಭೆ ಈ ಬಗ್ಗೆ ಚರ್ಚಿಸುತ್ತಾ, ಮಾನ್ಯ ಮುಖ್ಯ ಮಾಹಿತಿ ಆಯುಕ್ತರು ~~ಮುಖ್ಯ~~ ಚುನಾವಣಾ ಆಯುಕ್ತರ ಹುದ್ದೆಗೆ ತತ್ಸಮಾನ ಹುದ್ದೆಹೊಂದಿದವರಾಗಿದ್ದು, ಹಾಗೂ ರಾಜ್ಯ ಮಾಹಿತಿ ಆಯುಕ್ತರು ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಹುದ್ದೆಗೆ ತತ್ಸಮಾನ ಹುದ್ದೆ ಹೊಂದಿದವರಾಗಿರುವುದರಿಂದ ಸರ್ಕಾರ ನೀಡಿರುವ ಜ್ಞಾಪನದಂತೆ ಇವರ ವಾಹನಗಳ ಮೇಲೆಯೂ ಸಹ ಅಂಬರ್ ಲೈಟ್ ಅಳವಡಿಸುವ ಬಗ್ಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಸಭೆ ಸೂಚಿಸಿತು.

ಕ್ರಮ: ಕಾರ್ಯದರ್ಶಿ

7/10/15

ರಾಜ್ಯ ಮುಖ್ಯ ಮಾಹಿತಿ ಆಯುಕ್ತರು (ಪ್ರ)